**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.20/2011**

ಪಿರ್‍ಯಾದುದಾರರು:– ಹೊಸಕೋಟೆ ಅಬಕಾರಿ ಪೊಲೀಸರು

**–ವಿರುದ್ಧ–**

ಆರೋಪಿ:– ಕನ್ನಿಯಪ್ಪ ಬಿನ್ ಚಿನ್ನಕಣ್ಣು, 29 ವರ್ಷ
ವಾಸ: ದಿನ್ನಹಳ್ಳಿ ಮತ್ತು ಕೊಂಡ್ರಹಳ್ಳಿ ಮಧ್ಯೆ ಗುಡಿಸಲು,
ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಶ್ರೀ ಗಿರೀಶ ಆರ್.ಬಿ., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ: 18.10.2010 ರಂದು ಮಾನ್ಯ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ಅಬಕಾರಿ ಇಲಾಖಾ ವ್ಯಾಪ್ತಿಯ ಸರಹದ್ದು, ನಂದಗುಡಿ ಹೋಬಳಿಯಲ್ಲಿರುವ ದಿನ್ನಹಳ್ಳಿ ಮತ್ತು ಕೊಂಡ್ರಹಳ್ಳಿ ಗ್ರಾಮಗಳ ಮಧ್ಯದಲ್ಲಿ ಆರೋಪಿಯಾದ ನೀವು ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದು, ನಿಮ್ಮ ನಿವಾಸದಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಸುಮಾರು 12 ಲೀಟರ್ ಸೇಂದಿಯನ್ನು ಒಂದು ಹಸಿರು ಬಣ್ಣದ ಪ್ಲಾಸ್ಟಿಕ್ ಬಿಂದಿಗೆಯಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದು ಮಾರಾಟ ಮಾಡುತ್ತಿರುತ್ತೀರಿ ಎಂದು ಆರೋಪಿಸಲಾಗಿದೆ.

ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ.32, 34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ ಹೊಸಕೋಟೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.20/2011**

ಪಿರ್ಯಾದುದಾರರು:– ಹೊಸಕೋಟೆ ಅಬಕಾರಿ ಪೊಲೀಸರು

–ವಿರುದ್ದ–

ಆರೋಪಿ:– ಕನ್ನಿಯಪ್ಪ ಬಿನ್ ಚಿನ್ನಕಣ್ಣು, 29 ವರ್ಷ
ವಾಸ: ದಿನ್ನಹಳ್ಳಿ ಮತ್ತು ಕೊಂಡ್ರಹಳ್ಳಿ ಮಧ್ಯೆ ಗುಡಿಸಲು,
ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿನಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 27.10.2021 ರಂದು ಧೃಢೀಕರಿಸಿದ್ದೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ ಹೊಸಕೋಟೆ.